**ಸಾಕ್ಷಿಯನ್ನು ದಿಃ 05.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತ ಸ್ಥಳವನ್ನು ನಾನು ನೋಡಿಲ್ಲ. ನನ್ನ ಯಜಮಾನರು ಯಾವುದೇ ಔಷಧಿಗಳನ್ನು ಸೇವಿಸುತ್ತಿರಲಿಲ್ಲ. ಅವರು ಕನ್ನಡಕ ಹಾಕುತ್ತಿರಲಿಲ್ಲ. 1 ನೇ ಎದುರುದಾರರು ಟ್ರಾಕ್ಟರ್ ಅನ್ನು ಅವರ ಜಮೀನು ಪಕ್ಕದಲ್ಲಿ ನಿಲ್ಲಿಸಿಕೊಂಡಿದ್ದರು ಎಂದರೆ ಸಾಕ್ಷಿಯು ಊರಿನ ರಸ್ತೆಯಲ್ಲಿ ನಿಲ್ಲಿಸಿಕೂಂಡಿದ್ದರು ಎನ್ನುತ್ತಾರೆ. ನನ್ನ ಯಜಮಾನರಿಗೆ ಡಿ.ಎಲ್ ಇತ್ತು. ಅದು ಎಲ್ಲಿಟ್ಟಿದ್ದಾರೆ ಎಂದು ನನಗೆ ತಿಳಿದಿಲ್ಲ. ಎಲ್ಲಿ ನೊಂದಣಿ ಆಗಿದೆ ಎಂದರೆ ಗೊತ್ತಿಲ್ಲ. 1 ನೇ ಎದುರುದಾರರು ರಸ್ತೆಯ ಬದಿಯಲ್ಲಿ ಇಂಡಿಕೇಟರ್ ಹಾಕಿ ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ಟ್ರಯಲರ್ ಗೆ ರೇಡಿಯಮ್ ಇರುತ್ತದೆ ಎಂದರೆ ಇರಲಿಲ್ಲ ಎನ್ನುತ್ತಾರೆ. ನನನ ಯಜಮಾನರಿಗೆ ವಾಹನ ಚಾಲನೆ ಮಾಡಲು ಬಾರದೇ ಅತಿವೇಗವಾಗಿ ಚಲಾಯಿಸಿಕೊಂಡು ಸ್ವತಃ ಅಪಘಾತ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅಪಘಾತಕ್ಕೆ 1 ನೇ ಎದುರುದಾರರು ಕಾರಣರಲ್ಲ ಎಂದರೆ ಸರಿಯಲ್ಲ. ನಿದಾನವಾಗಿ ಚಲಾಯಿಸಿದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.